ದಿನಾಂಕ 15.02.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 1 ನೇ ಪ್ರತಿವಾದಿ ಪರ ವಕೀಲರಿಂದಃ-

ನಾನು ವಿದ್ಯಾಭ್ಯಾಸ ಮಾಡಿಲ್ಲ. ನಮ್ಮ ಮನೆಯ ವ್ಯವಹಾರಗಳನ್ನು ನಾನೇ ನೋಡಿಕೊಳ್ಳುವುದು ಎನ್ನುವುದು ನಿಜ. ಈ ದಾವೆಯ ಇತರ ವಾದಿಗಳು ಈ ದಾವೆಯನ್ನು ನಡೆಸಲು ನನಗೆ ಅಧಿಕಾರ ಕೊಟ್ಟಿರುತ್ತಾರೆ. ಸದರಿಯವರು ಈ ದಾವೆಯನ್ನು ಅವರ ಪರ ನಡೆಸುವಂತೆ ನನಗೆ ಮೌಖಿಕವಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲೆ ಮಾಡಿಕೊಟ್ಟಿರುವುದಿಲ್ಲ. ದಾವಾ ಸ್ವತ್ತು ಸರ್ವೇ ನಂ.96/2. ಅದರ ವಿಸ್ತೀರ್ಣ ಒಂದು ಎಕರೆ ಇಪ್ಪತ್ತಾರೂವರೆ ಗುಂಟೆ ಇರುತ್ತದೆ. ನನ್ನ ತಂದೆಯ ಹೆಸರು ಹುಚ್ಚೇಗೌಡ. ನನ್ನ ತಾತನ ಹೆಸರು ದೊಡ್ಡಚನ್ನೇಗೌಡ. ನನ್ನ ತಾತನಿಗೆ ಒಟ್ಟು 5 ಜನ ಮಕ್ಕಳು, ಅವರೆ ಹೆಸರುಗಳು ಮಾಯಣ್ಣ, ಹುಚ್ಚೇಗೌಡ (ನನ್ನ ತಂದೆ), ಕಳಸೇಗೌಡ, ಬಡಕೇಗೌಡ ಹಾಗೂ ಕುನ್ನೇಗೌಡ.

2. ದಾವಾ ಸ್ವತ್ತನ್ನು ನನ್ನ ತಂದೆ ಸುಮಾರು 80-85 ವರ್ಷಗಳ ಹಿಂದೆ ಕ್ರಯಕ್ಕೆ ಪಡೆದಿರುತ್ತಾರೆ. ನಾನು ಸದರಿ ಕ್ರಯಪತ್ರದ ವಿಚಾರವನ್ನು ತಿಳಿದುಕೊಂಡಿದ್ದೇನೆ. ವಾದಪತ್ರದಲ್ಲಿ ನನ್ನ ತಂದೆ ದಾವಾ ಸರ್ವೇ ನಂಬರ್‌ನ 24 ಗುಂಟೆ ಜಮೀನನ್ನು ರಾಮಯ್ಯ ತಂದೆ ಲೇಟ್ ಕುನ್ನೇಗೌಡರವರಿಗೆ ಕೊಟ್ಟಿರುವುದಾಗಿ ಬರೆಸಲಾಗಿದ್ದು, ಸದರಿ ರಾಮಯ್ಯ ತಂದೆ ಲೇಟ್ ಕುನ್ನೇಗೌಡ ರವರನ್ನು ಈ ದಾವೆಯಲ್ಲಿ ನಾವು ಸೇರಿಸಿಲ್ಲ. ಸದರಿಯವರ ಹೆಸರು ಸಹ ದಾವಾ ಸರ್ವೇ ನಂಬರ್‌ನ ಪಹಣಿಯಲ್ಲಿ ಬರುತ್ತಿದೆ ಎನ್ನುವುದು ನಿಜ.

3. ಪ್ರತಿವಾದಿಗಳು ನಮ್ಮ ಜಮೀನಿನ ಪಕ್ಕದ ಜಮೀನಿನವರಾಗಿದ್ದು ಹಾಗೂ ಒಂದೇ ಊರಿನವರಾಗಿದ್ದು ನಮಗೆ ಪರಿಚಯ. ಪ್ರತಿವಾದಿಗಳು ಸುಮಾರು 13-14 ವರ್ಷಗಳಿಂದ ನಮಗೆ ತೊಂದರೆ ಕೊಡುತ್ತಾ ಬಂದಿರುತ್ತಾರೆ. ಆ ಬಗ್ಗೆ ಅವರ ವಿರುದ್ಧ ಆ ಸಮಯದಲ್ಲಿ ನಾವು ಯಾವುದೇ ಕ್ರಮ ಕೈಗೊಂಡಿಲ್ಲ. ದಾವಾ ಸರ್ವೇ ನಂಬರ್‌ನ ಪಹಣಿಯಲ್ಲಿ ಯಾರ ಯಾರ ಹೆಸರುಗಳು ಬರುತ್ತಿವೆ ಎಂದು ಗೊತ್ತೇ? ಎಂದರೆ ಸಾಕ್ಷಿಯು ಈಗ 1ನೇ ಪ್ರತಿವಾದಿಯ ಹೆಸರು ಬರುತ್ತಿದೆ ಎಂದು ನುಡಿಯುತ್ತಾರೆ. ಈ ವಿಚಾರ ನನಗೆ 2-3 ವರ್ಷಗಳ ಮೊದಲು ಗೊತ್ತಾಗಿರುತ್ತದೆ.

4. ಸರ್ವೇ ನಂ.96/2 ರ 11 ಗುಂಟೆ ಸ್ವತ್ತನ್ನು ಮಣಹರಿಗೌಡರ ಮಗ ಮಾಯಣ್ಣ ಉರುಫ್ ಮೋಟಪ್ಪರವರು ದೊಡ್ಡಚನ್ನೇಗೌಡರ ಮಗ ಮಾಯಣ್ಣನಿಂದ ಖರೀದಿ ಮಾಡಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿಯವರು 11 ಗುಂಟೆ ಸ್ವತ್ತನ್ನು ಖರೀದಿ ಮಾಡಿ ಆ ಸಮಯದಿಂದಲೂ ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದರು ಎನ್ನುವುದು ಸರಿಯಲ್ಲ. ಅದರಂತೆ ಸದರಿಯವರ ಹೆಸರಿಗೆ ಖಾತೆಯೂ ಸಹ ದಾಖಲಾಗಿದೆ ಎನ್ನುವುದು ಸರಿಯಲ್ಲ. ದಾವಾ ಅನುಸೂಚಿ ಬಿ ಸ್ವತ್ತಾದ ಸರ್ವೇ ನಂ.96/2 ರ 11 ಗುಂಟೆ ಜಮೀನು ಮಾಯಣ್ಣ ಹಾಗೂ ಆತನ ಅಣ್ಣ-ತಮ್ಮಂದಿರ ನಡುವೆ ಆದಂತಹ ವಿಭಾಗದಲ್ಲಿ 1ನೇ ಪ್ರತಿವಾದಿಯ ಭಾಗಕ್ಕೆ ಬಂದಿದ್ದು ಅದರಂತೆ ಸದರಿ ಸ್ವತ್ತಿನ ಖಾತೆಯೂ 1ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿದೆ ಎನ್ನುವುದು ನಿಜ. ಸದರಿ ದಾಖಲೆಯನ್ನು ನಾನು ನಿಪಿ-3 ರಂತೆ ಹಾಜರುಪಡಿಸಿದ್ದೇನೆ ಎನ್ನುವುದು ನಿಜ. ಅದೇ ರೀತಿ ನಿಪಿ-8 ರಂತೆ ಮಾಯಣ್ಣ ಉರಫ್ ಮೋಟಪ್ಪನ

ಹೆಸರಿನಿಂದ 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಬದಲಾವಣೆಯಾಗಿರುವ ಸಂಬಂಧ ನಾನೇ ದಾಖಲೆ ಹಾಜರುಪಡಿಸಿದ್ದೇನೆ ಎನ್ನುವುದು ನಿಜ. ನಾನು 2018 ರಿಂದ ಇಲ್ಲಿಯವರೆಗಿನ ಪಹಣಿಗಳನ್ನು ಹಾಜರುಪಡಿಸಿದ್ದು, 2000 ದಿಂದ 2017 ರವರೆಗಿನ ಪಹಣಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇರಬಹುದು.

5. ನಿಪಿ-5 ರಿಂದ ನಿಪಿ-8 ದಾಖಲೆಗಳ ಪ್ರತಿಗಳನ್ನು ಯಾವಾಗ ಪಡೆದುಕೊಂಡಿದ್ದೇನೆ ಎನ್ನುವುದು ನನಗೆ ನೆನಪಿಲ್ಲ. ಸದರಿ ದಾಖಲೆಗಳನ್ನು ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ಅಥವಾ ನಂತರದಲ್ಲಿ ಪಡೆದುಕೊಳ್ಳಲಾಗಿದೆಯೇ? ಎನ್ನುವುದು ನನಗೆ ನೆನಪಿಲ್ಲ. ನಿಪಿ-17 ರ ಪ್ರಕಾರ 1 ನೇ ಪ್ರತಿವಾದಿಯ ಹೆಸರಿಗೆ ಪೋಡಾಗಿ ಹಿಸ್ಸೆಯಾಗಿರುವ ಸಂಬಂಧ ನಾನೇ ದಾಖಲೆ ಹಾಜರುಪಡಿಸಿದ್ದೇನೆ ಎನ್ನುವುದು ನಿಜ. ನಿಪಿ-17 ದಾಖಲೆಯನ್ನು ಯಾವಾಗ ಪಡೆದುಕೊಂಡಿದ್ದೇನೆ ಎನ್ನುವುದು ನನಗೆ ನೆನಪಿಲ್ಲ. ನಿಪಿ-7 ಮತ್ತು ನಿಪಿ-8 ಪಹಣಿಗಳನ್ನು ನಾನು 2009 ರಲ್ಲಿಯೇ ಪಡೆದುಕೊಂಡಿದ್ದೇನೆ ಎನ್ನುವುದು ನಿಜ.

6. ದಾವಾ ಅನುಸೂಚಿ ಎ ಸ್ವತ್ತಿನ ವಿಸ್ತೀರ್ಣ ಎಷ್ಟು ಎಂದು ಹಾಗೂ ದಾವಾ ಅನುಸೂಚಿ ಬಿ ಸ್ವತ್ತಿನ ವಿಸ್ತೀರ್ಣ ಎಷ್ಟು ಎಂದು ಹೇಳಲು ನಾನು ಮರೆತಿದಿದ್ದೇನೆ. ಸರ್ವೇ ನಂ.96/2 ರ ಯಾವ ವರ್ಷದ ಪಹಣಿಗಳನ್ನು ನಾನು ನೋಡಿದ್ದೇನೆ ಎಂದು ಹೇಳಲು ನೆನಪಿಲ್ಲ. 2000 ನೇ ಇಸವಿಗೂ ಮೊದಲು ಹಾಗೂ 2000 ನೇ ಇಸವಿಯಿಂದ 2007-08 ರವರೆಗೆನ ಸರ್ವೇ ನಂ.96/2 ರ ಪಹಣಿಗಳಲ್ಲಿ ನಮ್ಮ ತಂದೆ ಹುಚ್ಚೇಗೌಡರ ಹೆಸರು ಬಿಟ್ಟುಹೋಗಿತ್ತು ಎನ್ನುವುದು ಸರಿಯಲ್ಲ. ಆದರಂತೆ ನಮ್ಮ ತಂದೆಯ

ಹೆಸರನ್ನು ಪಹಣಿಯಲ್ಲಿ ಸೇರಿಸುವಂತೆ ಕೋರಿ ನಾವೇ ರಾಮನಗರದ ಉಪವಿಭಾಗಾಧಿಕಾರಿಗಳಿಗೆ ಅರ್ಜಿ ಕೊಟ್ಟಿದ್ದೆವು ಎನ್ನುವುದು ನಿಜ. ಸದರಿ ಪ್ರಕರಣದಲ್ಲಿ ಉಪವಿಭಾಗಾಧಿಕಾರಿಗಳ ಆದೇಶದನ್ವಯ ನಮ್ಮ ತಂದೆಯ ಹೆಸರು ಸರ್ವೇ ನಂ.96/2 ರ 31 ಗುಂಟೆಗೆ ದಾಖಲಾಯಿತು ಎನ್ನುವುದು ಸರಿಯಲ್ಲ. ನಾವು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಯಾರು ಯಾರು ಎಷ್ಟು ವಿಸ್ತೀರ್ಣದ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದು ಸದರಿ ಅರ್ಜಿಯಲ್ಲಿ ಬರೆದಿದ್ದೆವು ಎನ್ನುವುದು ನಿಜ. ಸದರಿ ಅರ್ಜಿಯಲ್ಲಿ ರಾಮಯ್ಯ ಬಿನ್ ಕುನ್ನೇಗೌಡರವರು 24 ಗುಂಟೆ, ಈಶ್ವರಯ್ಯ (1 ನೇ ಪ್ರತಿವಾದಿ) ಬಿನ್ ಮಣಹರಿಗೌಡರವರು 11 ಗುಂಟೆ ಸ್ವಾಧೀನದಲ್ಲಿರುವುದಾಗಿ ಹಾಗೂ ಹುಚ್ಚೇಗೌಡ ಬಿನ್ ದೊಡ್ಡಚನ್ನೇಗೌಡರವರ ಹೆಸರು 31 ಗುಂಟೆ ಜಮೀನಿಗೆ ಕೈಬಿಟ್ಟು ಹೋಗಿದೆ ಎಂದು ಬರೆಸಲಾಗಿದೆ ಎನ್ನುವುದು ನಿಜ. ಸಾಕ್ಷಿಯು ಮುಂದುವರೆದು ಈ ರೀತಿ ನಾವು ಅರ್ಜಿ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ 1 ನೇ ಪ್ರತಿವಾದಿಯ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.